ಹೆಗಡೆಯವರ ಹೆಸರಿಗೆ ಪವರ್ ಆಫ್ ಅಟಾರ್ನಿ ಮಾಡಿಸಿ ರಿಜಿಸ್ಟರ್ ಮಾಡಿಸಿಯಾಯ್ತು. 'ಈಗಿನ ಬೆಲೇಲಿ ನಿನ್ನ ಆಸ್ತಿಗೆ ಒಂದು ಕೋಟಿ ಸಿಕ್ಕೇ ಸಿಗಬೇಕು. ಒಪ್ಪಿಗೆಯಾದ ನಂತರ ವ್ಯವಹಾರ ಮುಗಿಸಿ ನಿನ್ನ ಅಕೌಂಟಿಗೆ ಹಾಕುವ, ಆಯ್ತಾ?...' ಹೇಳಿದ್ದಕ್ಕೆ, 'ಭಾವಾ, ಈ ವಿಷಯದಲ್ಲಿ ನಿರ್ಧಾರ ನಿಂದೇ. ಇಲ್ಲೀ ವ್ಯವಹಾರದ ವಿಷಯ ನಿಂಗೇ ಜಾಸ್ತಿ ಗೊತ್ತು. ಯಾವುದಿದ್ದರೂ ಫೋನು ಮಾಡಿಬಿಡು...' ಅಂದ ನಿರುಮ್ಮಳವಾದಂತೆ. ಎರಡು ದಿನ ನಂತರ ಮುಂಬಯಿಗೆ ಹೋಗಿ ವಿಮಾನ ಹತ್ತಿದ.

ಕಾಮತರ ಯೋಚನೆಯಲ್ಲಿ ಹೆಗಡೆಯವರು ಚಡಪಡಿಸುತ್ತಿದ್ದರು. 'ಜಗನ್ನಾಥನಿಗೆ ಎಂತದೋ ಅರ್ಜೆಂಟಿದ್ದ ಹಾಗೆ ಕಾಣಿಸಿತು ನೋಡು. ಅಮೆರಿಕದಲ್ಲಿ ಆಸ್ತಿ ಪಾಸ್ತಿ ತಗೋತಿದಾನೋ ಏನೋ...' ಎರಡು ಮೂರು ಸಾರಿ ಹೆಂಡತಿಯೆದುರು ಪ್ರಸ್ತಾಪಿಸಿದ್ದರು. ಜಗನ್ನಾಥನನ್ನು ಕಳಿಸಿಕೊಟ್ಟವರು ಮತ್ತಿನಮೇಲೆ ಹೋಗಿ ಕಾಮತರಿಗೆ ಫೋನು ಮಾಡಿದರು. ಕಾಮತರಿಗಿನ್ನೂ ಯಾವದೂ ವ್ಯವಹಾರ ಕುದುರಿರಲಿಲ್ಲ. ಕೆರೆ ಒತ್ತುವರಿ, ಸುಳ್ಳು ಕಾಗದಪತ್ರ ಅಂತೆಲ್ಲಾ ಸುದ್ದಿಗಳನ್ನು ನಿತ್ಯ ಕೇಳುತ್ತಿರುವ ಸಂದರ್ಭದಲ್ಲಿ ಸಂದೇಹ ನಿವೃತ್ತಿ ಮಾಡಿಕೊಳ್ಳುವ ಮಾರ್ಗ ಕಾಣದೆ ಗೊಂದಲದಲ್ಲಿದ್ದರು. ಮರುದಿನ ಬೆಳಿಗ್ಗೆ ವಿಮಾನದಲ್ಲಿ ಗೋವೆಗೆ ಹೊರಟಿದ್ದರು. '...ಅದನ್ನೇ ನೋಡಿ, ಹಿರಿಯರು ಹೇಳಿದ್ದು; ಋಣಾನುಬಂಧ ಅಂತ. ಅಲ್ಲಿ ಇಲ್ಲ; ಸಿಗಲಿಲ್ಲ. ಇಲ್ಲಿ ಬರೆದಿದಾನೆ ದೇವರು; ಸಿಕ್ಕಿದೆ ಅಂದುಕೊಳ್ಳಿ. ಎಂತಾ ಅಡಕೆ ತೋಟ ಅಂತೀರಿ? ನೋಡಿದರೇ ಗೊತ್ತಾಗೋದು! ನಾಲ್ಕೆಕರೆ ಒಂದೇ ಕಾಂಪೌಂಡು. ನನ್ನ ಪರಿಚಯ ಅನ್ನೋದಕ್ಕೆ ಹೇಳತೇನೆ, ನೀವಿದನ್ನ ಬಿಡಕೂಡದು. ತಡಮಾಡಿದ್ರೆ ಮೂರು ಮೂರು ಕೋಟಿ ಬಿಸಾಕಿ ಬರೆಸಿಕೊಳ್ಳೊಕೆ ತಯಾರಿದಾರೆ ಜನ...' ದನಿ ತಗ್ಗಿಸಿ ಎಚ್ಚರಿಕೆಯ ದನಿಯಲ್ಲಿ ಉಸುರಿದರು.

ಕಾಮತರ ಮನಸ್ಸು ಅತ್ತಕಡೆ ಡೋಲಾಯಮಾನವಾದಹಾಗೆ ಕಾಣಿಸಿತು. 'ಈಗೇನು ಮಾಡೋದು? ನಾಳೆ ಬೆಳಿಗ್ಗೆ ಫ್ಲೈಟಿದೆಯಲ್ಲಾ...'

'ಅದಕ್ಕೇನು? ಕ್ಯಾನ್ಸಲ್ ಮಾಡಿ. ತಡೀರಿ... ಬೇಡ, ಗೋವೆಯಿಂದಲೇ ನಮ್ಮೂರು ಸಮೀಪ. ನಾನೇ ಮಡಗಾಂವಿಗೆ ಬೆಳಿಗ್ಗೆ ಬರತೇನೆ. ನಾಕೈದು ತಾಸಿಗೆ ನಂದಳ್ಳಿಗೆ ಬಂದುಬಿಡಬಹುದು. ಮತ್ತೆ ಬೇರೆ ಯೋಚನೆ ಬೇಡ ಆಯ್ತಾ? ನಾಳೆ ಸಿಗುವ...' ಪಟ್ಟಿನಲ್ಲಿ ಸಿಕ್ಕಿಸಿದ ತೃಪ್ತಿಯಲ್ಲಿ ಫೋನ್ ಬಂದು ಮಾಡಿದರು.

'ಗಿರಿಜಾ, ಬೆಳಗಿನಜಾವ ಕಾರವಾರ ಬಸ್ಸು ಹಿಡೀಬೇಕು. ಮಡಗಾಂವನಲ್ಲಿ ಒಬ್ರನ್ನ ಕಾಣಬೇಕು. ದೊಡ್ಡ ಜನ. ಜಗನ್ನಾಥನ ಕೆಲಸ ಆಗೋಹಾಗಿದೆ...' ಎಂದು ತಯಾರಿಗೆ ತೊಡಗಿದರು.

ಬಸ್ಸು ದೇವಿಮನೆ ಘಟ್ಟ ಇಳಿದು ಬಲಕ್ಕೆ ಹೆದ್ದಾರಿಗೆ ತಿರುಗಿಕೊಂಡಿತು. ಒಂದು ಘಟನೆಗೆ ಉತ್ತರಾಧಿಕಾರಿಯಾಗಿ ಮುಂದಿನ ಘಟನೆಗಳು ಸಂಭವಿಸುತ್ತವೆಯೋ ಅಥವ ಭವಿಷ್ಯದ ಪೂರ್ವನಿರ್ಧರಿತ ಘಟನೆಗೆ ಸಹಕಾರಿಯಾಗಿ ಸಂದರ್ಭಗಳು ಸರಣಿಯಲ್ಲಿ ಸೃಷ್ಟಿಯಾಗುತ್ತವೊ ಒಡೆಯಲಾಗದ ಒಗಟು.

ಮಗನ ಮದುವೆಯಲ್ಲಿ ತನ್ನ ಪಾತ್ರ ಗೌಣ. ಆದರೆ ಫಲಿತದಲ್ಲಿ ಮಾತ್ರ ಪಾಲು ಹೇರಲ್ಪಟ್ಟಿದೆ. ಮಾದೇವಿಯದು ಹಾಗೆ. ಹಾವೇರಿಯಲ್ಲಿ ಕಾಮತರು ಆವತ್ತು ರೈಲಿನಲ್ಲಿ ಹೊರಟದ್ದಕ್ಕೆ ಈಗ ತಾನು ಗೋವೆಗೆ ಹೋಗುತ್ತಿದ್ದೇನೆ. ಮುಂದಿನ ಫಲಿತಾಂಶಗಳು ಅಸ್ಪಷ್ಟ... ಗುಡ್ಡದಕಡೆಯ ತಂಪುಗಾಳಿ ಒಳನುಗ್ಗಿ ಬಂತು.

ವಿಮಾನ ನಿಲ್ದಾಣದಲ್ಲಿ ಊರಿಗೆ ಟ್ಯಾಕ್ಸಿ ಮಾಡಿಬಿಡೋಣ ಅನ್ನಲು ಹೊರಟವರು ಅತಿಯಾದ ಆಸಕ್ತಿ ಪ್ರದರ್ಶನ ಸಂದೇಹಕ್ಕೆ ಕಾರಣವಾಗಬಹುದು ಎಂಬ ಎಚ್ಚರಿಕೆಯಿಂದ 'ಈಗ ಹೋಟೆಲಿಗೆ